## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 08 |
| ಸದಸ್ಯರ ಹೆಸರು | : ಶ್ರೀ ಬಸವರಾಜ್ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 16.07.2019 |
| ಉತ್ತರಿಸುವ ಸಚಿವರು | : ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | NRBC ನ 15, 16, 17 ಮತ್ತು 18ನೇ ಡಿಸ್ಟ್ರಿಬ್ಯೂರಿಯಲ್ಲಿ ಸುಮಾರು 20 ಹೆಕ್ಟೇರ್ ಪ್ರದೇಶಕ್ಕೆ ನಾಲೆಗಳ ಮುಖಾಂತರ ನೀರು ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ.<br>ನಾರಾಯಣಪುರ ಬಲದಂಡೆ ಕಾಲುವೆಯ ವಿತರಣಾ ಕಾಲುವೆ ಸಂ.15 ರಿಂದ 18ರ ಜಾಲಗಳಡಿ ಸಮರ್ಪಕ ನೀರಿನ ನಿರ್ವಹಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>1. ವಿತರಣಾ ಕಾಲುವೆ ಸಂ.15ರಿಂದ 18ರ ಜಾಲಗಳಡಿ ಲ್ಯಾಟರಲ್/ಸಬ್ ಲ್ಯಾಟರಲ್‌ಗಳಿಗೆ 136 ಗೇಟುಗಳನ್ನು ರೂ.531.30ಲಕ್ಷ ವೆಚ್ಚದಲ್ಲಿ ಈಗಾಗಲೇ ಅಳವಡಿಸಲಾಗಿರುತ್ತದೆ. |
| ಆ) | ಬಂದಿದ್ದರೆ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು : | 2. ವಿತರಣಾ ಕಾಲುವೆ ಸಂ.15ರಿಂದ 18ರಡಿ ಕಾಲುವೆ ಪ್ರಾರಂಭಿಸುವ ಅವಧಿಯಡಿ ಆಂತರಿಕ ವಾರಾಬಂದಿಯನ್ನು ಸಹ ಅನುಸರಿಸಿ ಕಾಲುವೆ ಅಂಚಿನ ಕ್ಷೇತ್ರಕ್ಕೆ ನೀರು ಪೂರೈಕೆಗೆ ಕ್ರಮವಹಿಸಲಾಗುತ್ತಿದೆ. |
| ಇ) | ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಯಾವಾಗ? | 3. 2018-19ನೇ ಸಾಲಿನಲ್ಲಿ ವಿತರಣಾ ಕಾಲುವೆ ಸಂ.15 ರಿಂದ 18ರ ಜಾಲಗಳಡಿ ಕ್ಲೋಜರ್ ಅವಧಿ ಮತ್ತು ವಿಶೇಷ ದುರಸ್ತಿ ಕಾಮಗಾರಿಗಳಿಗಾಗಿ ರೂ.525.00ಲಕ್ಷ ಅನುದಾನ ಒದಗಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಪ್ರಸಕ್ತ 2019-20ನೇ ಸಾಲಿನಲ್ಲಿ ಸಹ ಕ್ಲೋಜರ್ ಅವಧಿ ಮತ್ತು ವಿಶೇಷ ದುರಸ್ತಿ ಕಾಮಗಾರಿಗಳಿಗಾಗಿ ರೂ.625.00ಲಕ್ಷ ಅನುದಾನ ಒದಗಿಸಲಾಗಿರುತ್ತದೆ.<br>4. ವಿತರಣಾ ಕಾಲುವೆ 15, 16, 17 ಮತ್ತು 18ರ ಕಾಲುವೆ ಜಾಲದಲ್ಲಿ ಸಮರ್ಪಕ ನೀರು ಸರಬರಾಜಿನಲ್ಲಿ ಉಂಟಾಗುತ್ತಿರುವ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಈಗಾಗಲೇ ನಾ.ಬ.ದಂ.ಕಾ. ವಿತರಣಾ ಕಾಲುವೆ 9ಎ ಹಾಗೂ ನಾ.ಬ.ದಂ.ಕಾ. ಮುಖ್ಯ ಕಾಲುವೆಯ (ರೀಚ್ ಕಿ.ಮೀ.60.00ರಿಂದ 62.00) ಮಧ್ಯ ಭಾಗದಲ್ಲಿ ದೇವದುರ್ಗ ತಾಲ್ಲೂಕಿನ ಗಾಣದಾಳ-ಊಟಿ ಗ್ರಾಮಗಳ ಬಳಿಯ ಕಣಿವೆಯ (ತಗ್ಗು ಪ್ರದೇಶ) ಸ್ಥಳದಲ್ಲಿ ಸೂಕ್ತ Balancing Reservoir ನಿರ್ಮಿಸುವುದರ ಕುರಿತಂತೆ ವಿವರವಾದ ಸರ್ವೆ ತನಿಖಾ ಕಾರ್ಯ ಕೈಗೊಂಡಿದ್ದು ತಾಂತ್ರಿಕ ಸಾಧ್ಯ-ಸಾಧ್ಯತೆಯ ಪ್ರಸ್ತಾವನೆ (Technical Feasibility Proposal) ಅಂತಿಮಗೊಳಿಸಲು ಕ್ರಮ ವಹಿಸಲಾಗಿದೆ.<br>5. ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ.0.00ರಿಂದ 95.00ರವರೆಗಿನ ಆಧುನೀಕರಣದ ಯೋಜನೆ ಕಾಮಗಾರಿಯನ್ನು 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದ್ದು, ಸದರಿ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿದ್ದು, 2019-20ನೇ ಸಾಲಿನ ಕ್ಲೋಜರ್ ಅವಧಿಯಲ್ಲಿ ಮುಖ್ಯ ಕಾಲುವೆ ಆಧುನೀಕರಣ ಕೈಗೊಳ್ಳಲು ನಿಗಮದ ಹಂತದಲ್ಲಿ ಕ್ರಮ ಜರುಗಿಸಲಾಗುತ್ತಿದೆ. |

ಸಂಖ್ಯೆ: ಜಸಂಇ 40 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ)
ಜಲಸಂಪನ್ಮೂಲ ಸಚಿವರು